**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 986/13**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-2**

| | | |
|---|---|---|
| ಸಾಕ್ಷಿದಾರರ ಹೆಸರು | : | ನಾಗರಾಜು |
| ತಂದೆಯ/ ಗಂಡನ ಹೆಸರು | : | ದಾಸಾಚಾರಿ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಅರಣ್ಯ ವೀಕ್ಷಕ |
| ವಾಸ ಸ್ಥಳ | : | ಸುತ್ತೂರು |

**ದಿನಾಂಕ 21.11.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ಸುಮಾರು 6-7 ವರ್ಷದಿಂದ ಅರಣ್ಯ ವೀಕ್ಷಕನಾಗಿ ಯಡಿಯಾಳ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿತರು ಗೊತ್ತು. ಚಾಸಾ 1 ರಿಂದ 3 ಗೊತ್ತು. ದಿಃ28.05.2012 ರಲ್ಲಿ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ನಾನು, ಚಾಸಾ 2, 7, 8, ಶ್ರೀನಿವಾಸ ಮೂರ್ತಿ ರವರು ಗೇಟ್ ಬಳಿ ಇದ್ದಾಗ ಸಾರ್ವಜನಿಕರು ಕಾಡಿನ ಒಳಗಡೆ ಧನ ಮೇಯಿಸಲು ತಳ್ಳಾಡಿಕೊಂಡು ಬಂದಿರುತ್ತಾರೆ. ಚಾಸಾ 1 ರವರು ಹೋಗಬೇಡಿ ಎಂದು ತಡೆದಿರುತ್ತಾರೆ, ಆಗ ಗಲಾಟೆ ಮಾಡಿ ಗೇಟ್ ತಳ್ಳಲು ಪ್ರಯತ್ನಪಟ್ಟಿರುತ್ತಾರೆ, ಆಗ ಚಾಸಾ 1 ರವರು ಕೆಳಗಡೆ ಬಿದ್ದಿರುತ್ತಾರೆ. ನಂತರ ಶ್ರೀನಿವಾಸ ಮೂರ್ತಿ DRFO ರವರು RFO ರವರಿಗೆ ಫೋನ್ ಮಾಡಿ ಬರಲು ತಿಳಿಸಿರುತ್ತಾರೆ. ನಂತರ ನಾವೆಲ್ಲ DRFO

ರವರನ್ನು ಸರಗೂರು ಆಸ್ಪತ್ರೆಗೆ ಸೇರಿಸಿರುತ್ತೇವೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

## ಪಾಟೀ ಸವಾಲುಃ  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

DRFO ಹೆಸರು ನರಸಿಂಹಮೂರ್ತಿ ಎಂದರೆ ಸರಿ. ಸದರಿ ದಿನ ಬೆಳಿಗ್ಗೆ  11 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 1 ರಿಂದ 3, 5 ರಿಂದ 7 ರವರು ಯಡಿಯಾಳ ವಲಯದ ಚಿಕ್ಕಬರಗಿ ಚೈನ್ ಗೇಟ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಆರೋಪಿತರು ಅಕ್ರಮ ಕೂಟ ಕಟ್ಟಿಕೊಂಡು ಬಂದು ಅವಾಚ್ಯ ಶಬ್ದಗಳಿಂದ ಬೈಯ್ದು ಕರ್ತವ್ಯಕ್ಕೆ ಅಡ್ಡಿಪಡಿಸಿ ಗೇಟ್ ನ್ನು ತಳ್ಳಿದ್ದರಿಂದ ಗೇಟಿನ ರಾಡ್ ಚಾಸಾ 1 ರವರ ಕೈಗೆ ಚುಚ್ಚಿ ರಕ್ತಗಾಯ ವಾಗಿದ್ದು, ಚಾಸಾ 2 ಮತ್ತು 3 ರವರಿಗೆ ಕೈಗೆ ತೆರಚಿದ ಗಾಯವಾಗಿದ್ದು, ಚಾಸಾ 5 ರಿಂದ 7 ರವರು ಜಗಳ ಬಿಡಿಸಿ ಚಾಸಾ 1 ರಿಂದ 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ.

## ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ

ದಿಃ25.08.2012 ರಂದು ಬೆಳಿಗ್ಗೆ 11 ಗಂಟೆ ನಾನು ಗೇಟಿನ ಬಳಿ ಇದ್ದೆ. ನನ್ನನ್ನು ಚಾಸಾ 1 ರವರು ಕರೆಸಿರುತ್ತಾರೆ. ನಾನು ಬೆಲುಕುಪ್ಪೆಯಲ್ಲಿ 4 ವರ್ಷದಿಂದ ವಾಸ ಇದ್ದೇನೆ. ನಮ್ಮ ಕಛೇರಿಯಿಂದ ಸದರಿ ಗೇಟ್ ಗೆ 15 ಕಿ.ಮೀ ಆಗುತ್ತದೆ. ಚಾಸಾ 1 ರವರು ನನಗೆ ಕರೆ ಮಾಡಿದಾಗ ಬೆಲುಕುಪ್ಪೆಯಲ್ಲಿ ಇದ್ದೆ. ಬೆಲುಕುಪ್ಪೆಯಲ್ಲಿ ಇರುವ ದೇವಸ್ಥಾನಕ್ಕೆ ಸೋಮವಾರ ಮತ್ತು ಶುಕ್ರವಾರ ಸಾರ್ವಜನಿಕರನ್ನು ಬಿಡುತ್ತಿದ್ದರು ಎಂದರೆ ಸರಿ. ಗೇಟ್ ನಿಂದ ದೇವಸ್ಥಾನಕ್ಕೆ 5 ಕಿ.ಮೀ ಆಗುತ್ತದೆ. ಸದರಿ ವಿಚಾರವನ್ನು ನನಗೆ ವೈರಲೆಸ್ ಮೂಲಕ ತಿಳಿಸಿದ್ದು ನಡೆದುಕೊಂಡು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. ಸದರಿ ದಿನ ನಾನು ಮತ್ತು ಚಾಸಾ 7 ರವರು ಗಸ್ತಿನಲ್ಲಿ ಇದ್ದೇವು. ಗೇಟ್ ಬಳಿ ಬಂದಾಗ 11.15 ಆಗಿತ್ತು. ಸದರಿ ಸಮಯದಲ್ಲಿ ನಮ್ಮ ಸಿಬ್ಬಂದಿ 5 ಜನ ಮತ್ತು ಸಾರ್ವಜನಿಕರು 5 ಜನ ಇದ್ದರು. ಗಲಾಟೆ ಸಮಯದಲ್ಲಿ ನಾನು ಹತ್ತಿರದಲ್ಲಿ ಇದ್ದೇನು. ಯಾರು ಗೇಟ್ ಚೈನ ಎತ್ತಿರುತ್ತಾರೆ ಎಂದರೆ ಎಲ್ಲರೂ ಎತ್ತಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 1 ರವರ ಯಾವ ಕೈಗೆ

ಗಾಯ ವಾಗಿರುತ್ತದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಚಾಸಾ 2 ಮತ್ತು 3 ರವರ ಯಾವ ಕೈಗೆ ತೆರಚಿದ ಗಾಯ ಆಗಿರುತ್ತದೆ ಎಂದು ಹೇಳಿಲ್ಲ. ಚಾಸಾ 1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ಯಾರು ಯಾರನ್ನು ತಳ್ಳಾಡಿರುತ್ತಾರೆ ಎಂದು ನಾನು ನೋಡಿಲ್ಲ ಎಂದರೆ ಸರಿ. ಸದರಿ ವಿಚಾರವಾಗಿ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬೇಸಿಗೆ ಸಮಯದಲ್ಲಿ ಧನಗಳನ್ನು ಮೇಯಿಸಲು ಅನುಮತಿ ಕೊಟ್ಟಿದ್ದರು ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**